# 1-3

# ವಂದನೆಗಳು

ಪ್ರಾಚೀನ ಪತ್ರಿಕೆಗಳಲ್ಲಾಗಲಿ ಅಥವಾ ಆಧುನಿಕ ಪತ್ರಗಳಲ್ಲಿ ಆಗಲಿ, ಬರಹಗಾರನು ಸಾತ್ವಿಕತ್ವದಿಂದ ಲೇಖಕನೊಬ್ಬನು ಸಂದೇಶವನ್ನು ಆರಂಭಿಸುವದಕ್ಕೆ ವಂದನೆಗಳು ಸಿದ್ಧ ಸೂತ್ರಗಳಾಗಿರುತ್ತವೆ. ತತ್ಪರಿಣಾಮವಾಗಿ, ಕೆಲವು ಸಾರಿ ಅವುಗಳನ್ನು ಅವಸರವಾಗಿ ಓದಿ ಮುಂದೆ ಹೋಗಲಾಗುತ್ತದೆ ಅಥವಾ ವಾಚಕನು ಕಾತರದಿಂದ ಪತ್ರಿಕೆಯ ಮುಖ್ಯ ತಿರುಳಿನೆಡೆಗೆ ಅವಸರದಿಂದ ಸಾಗುವವನಾಗಿ ಅವುಗಳನ್ನು ಸಂಪೂರ್ಣವಾಗಿ ಓದದೆ ದಾಟಿಕೊಂಡೇ ಹೋಗುವನು. ಫಿಲೆಮೋನನಿಗೆ ಬರೆದ ಪತ್ರಿಕೆಯ ಆರಂಭಿಕ ಮಾತುಗಳನ್ನು ನಿರ್ಲಕ್ಷದಿಂದ ಓದಬಾರದು. ಖಂಡಿತವಾಗಿಯೂ, ಪತ್ರಿಕೆಯ ಸಾಮಾಜಿಕ ಪ್ರೇರಕಶಕ್ತಿಗಳು ಮತ್ತು ಭಾವನಾತ್ಮಕ ಗಾಢತೆಯು ಆರಂಭಿಕ ವಚನಗಳಲ್ಲಿಯೇ ಪ್ರಕಟಗೊಳಿಸಲ್ಪಟ್ಟಿರುತ್ತವೆ.

**1-3**

**[1]ಕ್ರಿಸ್ತ ಯೇಸುವಿನ ಸೆರೆಯವನಾಗಿರುವ ಪೌಲನೂ ಸಹೋದರನಾದ ತಿಮೊಥೆಯನೂ ನಮಗೆ ಪ್ರಿಯನೂ ಜೊತೆಗೆಲಸದವನೂ ಆಗಿರುವ ಫಿಲೆಮೋನನೆಂಬ ನಿನಗೂ**
**[2]ಸಹೋದರಿಯಾದ ಅಪ್ಫಿಯಳಿಗೂ ನಮ್ಮ ಸಹಭಟನಾದ ಅರ್ಖಿಪ್ಪನಿಗೂ ನಿನ್ನ ಮನೆಯಲ್ಲಿ ಕೂಡುವ ಸಭೆಯವರಿಗೂ ಬರೆಯುವದೇನೆಂದರೆ – [3]ನಮ್ಮ ತಂದೆಯಾದ ದೇವರಿಂದಲೂ**
**ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ.**

**ವಚನ 1.** ಗ್ರೀಕ್ ಹಾಗೂ ಇಬ್ರಿಯ ವಾಕ್ಯದಲ್ಲಿ ಆರಂಭದಲ್ಲಿರುವ ಪದವು **ಪೌಲ** ಎಂದಾಗಿರುತ್ತದೆ. ಈ ಮುಂಚೆ "ತಾರ್ಸ ಪಟ್ಟಣದ ಸೌಲ" ಎಂದು ಪರಿಚಿತನಿದ್ದ (ನೋಡಿರಿ ಅಪೊಸ್ತಲರ ಕೃತ್ಯಗಳು 13:9; 21:39), ಈ "ಅನ್ಯಜನರಿಗೆ ಅಪೊಸ್ತಲನಾಗಿರುವವನು" ಒಬ್ಬ ಮಿಶನರಿಯಾಗಿದ್ದು ಹೊಸ ಒಡಂಬಡಿಕೆಯು ಒಳಗೊಂಡಿರುವಂಥ ಕನಿಷ್ಠ ಹದಿಮೂರು ಪತ್ರಿಕೆಗಳನ್ನು ಬರೆದಿದ್ದಾನೆ. ಕೆಲವು ಸಂದರ್ಭಗಳಲ್ಲಿ ಆತನು ತನ್ನ ಪತ್ರಿಕೆಗಳನ್ನು ಹೇಳಿ ಬರೆಸಿದರೆ (ರೋಮ ರೋಮಾ 16:22), ಇನ್ನು ಕೆಲವು ಪತ್ರಿಕೆಗಳಲ್ಲಿ ಆತನು ಪತ್ರಿಕೆಯ ಪ್ರಾಮಾಣ್ಯವನ್ನು ಸೂಚಿಸುವದಕ್ಕೆ ಮುಕ್ತಾಯದ ಹೇಳಿಕೆಯೊಂದನ್ನು ಬರೆಯುತ್ತಿದ್ದನು (ಕೊಲೊಸ್ಸೆ 4:18; 2 ಥೆಸಲೋನಿಕ 3:17). ಫಿಲೆಮೋನನಿಗೆ ಬರೆದ ಪತ್ರಿಕೆಯ ವಿಷಯದಲ್ಲಿ ನೋಡುವದಾದರೆ, ಅದನ್ನು ಆತನು ಸಂಪೂರ್ಣವಾಗಿ ಕೈಯಿಂದ ಬರೆದಿರಬಹುದು ಅಥವಾ 19ನೇ ವಚನದಲ್ಲಿನ ವಾಯಿದೆಯ ಮಾತುಗಳನ್ನಷ್ಟೆ ಬರೆದಿರಬಹುದಾಗಿದೆ.

ಪೌಲನು ತನ್ನನ್ನು **ಸೆರೆಯವನಾಗಿರುವ** ಎಂದು ಪರಿಚಯಿಸಿಕೊಂಡನು, ಅದು ಆತನು

9ನೇ ವಚನದಲ್ಲಿ ಪುನರಾವರ್ತಿಸಿದ ಪದವಾಗಿರುತ್ತದೆ. ಇದಕ್ಕೆ ಮುಂಚೆ ಆತನು ಕೊರಿಂಥದಲ್ಲಿನ ತನ್ನ ಸಂದೇಹವಾದಿಗಳಿಗೆ ತಾನು ಅವರಿಗಿಂತಲೂ "ಹೆಚ್ಚಾಗಿ ಸೆರೆಮನೆಗಳೊಳಗೆ ಬಿದ್ದೆನು" ಎಂದು ಬರೆದನು (2 ಕೊರಿಂಥ 11:23). ಸೆರೆಯವನಾಗಿರುವದು ಪೌಲನಿಗೆ ಒಂದು ಸತತವಾದ ಅನುಭವವಾಗಿತ್ತು, ಮತ್ತು ಅಪೊಸ್ತಲರ ಕೃತ್ಯಗಳು 23-28 ಅಧ್ಯಾಯಗಳಲ್ಲಿ ಬರೆಯಲ್ಪಟ್ಟಿರುವ ಆತನ ಜೀವಿತದ ಕೊನೆಯ ವರ್ಷಗಳಲ್ಲಿ ಸಂಪೂರ್ಣವಾಗಿ ಒಬ್ಬ ಸೆರೆಯವನಾಗಿ ಕಳೆದನು. ಒಬ್ಬ ರೋಮನ್ ನಾಗರಿಕವಾಗಿ, ಸೆರೆಮನೆಯಲ್ಲಿ ಒಬ್ಬ ನಾಗರಿಕನಲ್ಲದವನನ್ನು ನೋಡಿಕೊಳ್ಳುತ್ತಿದ್ದದಕ್ಕಿಂತಲೂ ಪೌಲನನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿತ್ತು (ಅಪೊಸ್ತಲರ ಕೃತ್ಯಗಳು 16:35-39; 22:25-29).

ಪೌಲನು ರೋಮನ್ ಸರ್ಕಾರದಿಂದ ಸೆರೆಮನೆಗೆ ಹಾಕಲ್ಪಟ್ಟಿದ್ದನಾದರೂ, ಆತನ ಮನಸ್ಸಿನಲ್ಲಿ ಆತನು ನಿಜಕ್ಕೂ **ಯೇಸುವಿನ ಸೆರೆಯವನಾಗಿದ್ದನು**. ಆತನು ತನ್ನನ್ನು "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನು" ಎಂಬದಾಗಿ ಪರಿಗಣಿಸಿಕೊಂಡಿದ್ದನು (ಗಲಾತ್ಯ 2:20) ಮತ್ತು ತಾನು ಹಾಗೂ ತಿಮೊಥೆಯನು "ಕ್ರಿಸ್ತ ಯೇಸುವಿನ ದಾಸರು" ಎಂದು ನಂಬಿದ್ದನು (ಫಿಲಿಪ್ಪಿ 1:1). ಯೆರೂಸಲೇಮಿನಲ್ಲಿರುವ ಯೆಹೂದ್ಯರು ಆತನನ್ನು ಕಟ್ಟಿ ಅನ್ಯಜನಗಳ ಕೈಗೆ ಒಪ್ಪಿಸುವರೆಂದು ಪ್ರವಾದಿಯಾದ ಅಗಬನು ಹೇಳಿದಾಗ, ಪೌಲನು ತನ್ನ ಬೆಂಬಲಿಗರಿಗೆ ಹೀಗೆ ಹೇಳುತ್ತಾನೆ, "ನೀವು ಅತ್ತತ್ತು ಏಕೆ ನನ್ನ ಎದೆ ಒಡಿಸುತ್ತೀರಿ? ನಾನು ಕರ್ತನಾದ ಯೇಸುವಿನ ಹೆಸರಿನ ನಿಮಿತ್ತವಾಗಿ ಯೆರೂಸಲೇಮಿನಲ್ಲಿ ಬೇಡೀಹಾಕಿಸಿಕೊಳ್ಳುವದಕ್ಕೆ ಮಾತ್ರವಲ್ಲದೆ ಸಾಯುವದಕ್ಕೂ ಸಿದ್ಧವಾಗಿದ್ದೇನೆ" (ಅಪೊಸ್ತಲರ ಕೃತ್ಯಗಳು 21:13).

"ಕ್ರಿಸ್ತ ಯೇಸು" ಎಂಬದು ಪೌಲನು ತನ್ನ ಕರ್ತನನ್ನು ಸಂಬೋಧಿಸಿ ಮಾತಾಡುವ ಆತನ ನೆಚ್ಚಿನ ರೀತಿಯಾಗಿತ್ತು. "ಯೇಸು," ಎಂದರೆ "ಕರ್ತನು ರಕ್ಷಿಸುವನು" ಎಂದರ್ಥವಾಗಿದ್ದು (ಮತ್ತಾಯ 1:21), ಇದು ದೇವಕುಮಾರನಿಗೆ ಆತನ ಜನನದಲ್ಲಿ ಕೊಡಲಾಗಿದ್ದ ಹೆಸರಾಗಿತ್ತು. "ಕ್ರಿಸ್ತನು" (ಇಬ್ರಿಯದಲ್ಲಿ "ಮೆಸ್ಸೀಯ") ಎಂದರೆ "ಅಭಿಷೇಕ್ತನು" ಮತ್ತು ಅದು ಮೆಸ್ಸೀಯನು ನೆರವೇರಿಸಿದಂಥ ಪ್ರವಾದನೆ ಮಾಡಲ್ಪಟ್ಟಿದ್ದ ಪಾತ್ರವಾಗಿರುತ್ತದೆ (ಮತ್ತಾಯ 16:16). "ಕ್ರಿಸ್ತನು" ಮತ್ತು "ಯೇಸು" ಎಂಬ ಎರಡು ಹೆಸರುಗಳನ್ನು ಒಟ್ಟಾಗಿ ಅಥವಾ ಪರ್ಯಾಯವಾಗಿ ಬಳಸಲ್ಪಟ್ಟಿವೆಯಾದರೂ, "ಯೇಸು" ಎಂಬುದು ಆತನ ಹೆಸರು, ಮತ್ತು "ಕ್ರಿಸ್ತನು" ಎಂಬುದು ಆತನ ಬಿರುದು ಆಗಿರುತ್ತದೆದ. ಪೌಲನು ಆತನ ಬಗ್ಗೆ ವಿವಿಧ ಸಮಯಗಳಲ್ಲಿ "ಕ್ರಿಸ್ತನು," "ಯೇಸು," "ಕ್ರಿಸ್ತ ಯೇಸು," ಮತ್ತು "ಯೇಸು ಕ್ರಿಸ್ತನು" ಎಂದು ಮಾತಾಡುತ್ತಾನೆ.

ವಂದನೆಗಳಲ್ಲಿನ ಮಾತುಗಳು ಎಷ್ಟು ಮಹತ್ವಪೂರ್ಣವೆಂದು ಕಾಣಬಹುದಾದರೂ, ಅದಕ್ಕಿಂತಲೂ ಮಹತ್ವಪೂರ್ಣವಾದದ್ದೆಂದರೆ ಕಾಣಿಸದಿರುವ ಪದ: "ಅಪೊಸ್ತಲ" ಎಂಬ ಪದ. ಹಲವಾರು ಸಂದರ್ಭಗಳಲ್ಲಿ ಪೌಲನು ತನ್ನನ್ನು "ಅಪೊಸ್ತಲನಾದ, ಪೌಲ" ಎಂದು ಪರಿಚಯಿಸಿಕೊಳ್ಳುವ ಮೂಲಕ ತನ್ನ ಪತ್ರಿಕೆಯನ್ನು ಆರಂಭಿಸುತ್ತಾನೆ.[1] ಈ ಸಂದರ್ಭದಲ್ಲಿ, ಆತನು ಆ ರೀತಿಯಲ್ಲಿ ಆರಂಭಿಸಲಿಲ್ಲ. ಆರಂಭದಲ್ಲಿ ಇದು ವಿಚಿತ್ರವೆಂದು ತೋರಬಹುದಾದರೂ, ಪೌಲನು ತನ್ನನ್ನು "ಅಪೊಸ್ತಲನು" ಎಂಬದರ ಬದಲಾಗಿ

"ಸೆರೆಯವನು" ಎಂದು ಬಣ್ಣಿಸಿಕೊಂಡದ್ದನ್ನು ವಾಚಕನು ಶೀಘ್ರದಲ್ಲಿಯೇ ಶ್ಲಾಘಿಸುವವನಾಗುತ್ತಾನೆ. ಆತನು ಒಂದು ಸೂಕ್ಷ್ಮವಾದ ಸಂಧಾನಕ್ಕಾಗಿ ಪ್ರೋತ್ಸಾಹ ಮಾಡಬೇಕಿತ್ತು, ಮತ್ತು ತನ್ನನ್ನು ಅಧಿಕಾರ ಚಲಾಯಿಸುವವನು, ದಬ್ಬಾಳಿಕೆ ಮಾಡುವವನು, ಅಥವಾ ನಿಯಂತ್ರಣ ಮಾಡುವವನು ಎಂದು ಅಪಾರ್ಥಕ್ಕೆ ಒಳಪಡಿಸಿಕೊಳ್ಳದಿರುವಂತೆ ಆತನು ಎಚ್ಚರವಾಗಿ ನಡೆದುಕೊಳ್ಳುತ್ತಿದ್ದಾನೆ (ವ. 14). "ಕ್ರಿಸ್ತ ಯೇಸುವಿನ ಒಬ್ಬ ಅಪೊಸ್ತಲನೂ" ಎಂಬದಲ್ಲ, "ಕ್ರಿಸ್ತ ಯೇಸುವಿನ ಸೆರೆಯವನಾಗಿರುವ ಪೌಲನೂ" ಎಂಬುದೇ ಆ ಕೆಲಸವನ್ನು ಆರಂಭಿಸುವದಕ್ಕೆ ಒಂದು ಉತ್ತಮ ದಾರಿಯಾಗಿತ್ತು. ಫಿಲೆಮೋನನು ಸರಿಯಾದ ಕಾರ್ಯವನ್ನು ಮಾಡಿದಾಗ, ಅದು "ತತ್ಫಲಿತವಾಗಿ, ಒತ್ತಾಯದಿಂದಲ್ಲ ಆದರೆ [ಆತನ] ಸ್ವೇಚ್ಛಾ-ಚಿತ್ತದಿಂದಲೇ" ಆಗಿರಬೇಕೆಂಬದಾಗಿ ಪೌಲನು ನಿಷ್ಕರ್ಷೆ ಮಾಡಿಕೊಂಡಿದ್ದನು (ವ. 14).

ಈ ಪತ್ರಿಕೆಯ ಸಹ-ರವಾನೆಗಾರನು **ಸಹೋದರನಾದ ತಿಮೊಥೆಯನೂ** ಆಗಿದ್ದನು. ಪೌಲನ ಎರಡನೆಯ ಸುವಾರ್ತಾ ಪ್ರಯಾಣದ ಆರಂಭದ ಸಮಯದಿಂದ (ಅಪೊಸ್ತಲರ ಕೃತ್ಯಗಳು 16:1), ತಿಮೊಥೆಯನು ಆತನ ವಿಶ್ವಾಸಾರ್ಹ ಸಹಚರನು ಮತ್ತು ಶಿಕ್ಷಾರ್ಥಿ ಆಗಿದ್ದನು. ಸೆರೆಮನೆಯಲ್ಲಿ ಬರೆದ ಇನ್ನೊಂದು ಪತ್ರಿಕೆಯಲ್ಲಿ, ಪೌಲನು ತಿಮೊಥೆಯಲ್ಲಿ ತನಗಿರುವ ಭರವಸೆಯ ಕುರಿತಾಗಿ ಈ ಕೆಳಗಿನ ಮಾತುಗಳನ್ನು ಬರೆಯುತ್ತಾನೆ:

> ಆದರೆ ಕರ್ತನಾದ ಯೇಸುವಿನ ಚಿತ್ತವಾದರೆ ನಾನು ತಿಮೊಥೆಯನನ್ನು ಬೇಗನೆ ನಿಮ್ಮ ಬಳಿಗೆ ಕಳುಹಿಸಬೇಕೆಂದು ನಿರೀಕ್ಷಿಸುತ್ತೇನೆ. ಅವನ ಮುಖಾಂತರ ನಿಮ್ಮ ಸಂಗತಿಗಳನ್ನು ತಿಳಿದು ನಾನೂ ಧೈರ್ಯ ತಂದುಕೊಂಡೇನು. ಅವನ ಹಾಗೆ ನಿಮ್ಮ ಕಾರ್ಯಗಳನ್ನು ಕುರಿತು ಯಥಾರ್ಥವಾಗಿ ಚಿಂತಿಸುವವರು ನನ್ನ ಬಳಿಯಲ್ಲಿ ಬೇರೆ ಯಾರೂ ಇಲ್ಲ. ಎಲ್ಲರೂ ಸ್ವಕಾರ್ಯಗಳ ಮೇಲೆ ಮನಸ್ಸಿಡುತ್ತಾರೆಯೇ ಹೊರತು ಯೇಸು ಕ್ರಿಸ್ತನ ಕಾರ್ಯಗಳ ಮೇಲೆ ಮನಸ್ಸಿಡುವದಿಲ್ಲ. ತಿಮೊಥೆಯನ ಗುಣವನ್ನು ನೀವು ನೋಡಿ ತಿಳಿದುಕೊಂಡಿದ್ದೀರಿ; ಮಗನು ತಂದೆಗೆ ಹೇಗೋ ಹಾಗೆಯೇ ಅವನು ನನ್ನ ಜೊತೆಯಲ್ಲಿ ಸುವಾರ್ತಾಪ್ರಚಾರಕ್ಕಾಗಿ ಕಷ್ಟಪಟ್ಟು ಕೆಲಸನಡಿಸಿದನೆಂಬದು ನಿಮಗೆ ಗೊತ್ತುಂಟು . . . (ಫಿಲಿಪ್ಪಿ 2:19-23).

ಪೌಲನು ತನ್ನ ವಂದನೆಯನ್ನು ಹೇಳುವದರಲ್ಲಿ ತಿಮೊಥೆಯನನ್ನು ಪಟ್ಟಿಯಲ್ಲಿ ಸೇರಿದ್ದಾನಾದರೂ, ಪತ್ರಿಕೆಯ ಬರಹಗಾರನು ಪೌಲನೇ ಹೊರತು ತಿಮೊಥೆಯನಲ್ಲ ಎಂಬುದು ಶೀಘ್ರದಲ್ಲೇ ಸ್ಪಷ್ಟಗೊಳ್ಳುತ್ತದೆ. 4ನೇ ವಚನದಲ್ಲಿ ಮೊದಲ್ಗೊಂಡು, ಪೌಲನು ಉತ್ತಮ ಪುರುಷ ಬಹುವಚನದ ("ನಾವು" ಮತ್ತು "ನಮ್ಮ") ಬದಲಾಗಿ ಉತ್ತಮ ಪುರುಷ ಏಕವಚನದಲ್ಲಿ ("ನಾನು" ಮತ್ತು ನನಗೆ") ಬರೆಯುತ್ತಾನೆ. "ಮುದುಕನೂ ಕ್ರಿಸ್ತ ಯೇಸುವಿನ ನಿಮಿತ್ತ ಸೆರೆಯವನೂ ಆಗಿರುವ ಪೌಲ" (ವ. 9)ನು ಪತ್ರಿಕೆಯ ಪ್ರಾಥಮಿಕ ಲೇಖಕನಾಗಿದ್ದನು.

ಪತ್ರಿಕೆಯಲ್ಲಿ ಮೊದಲು ಸಂಬೋಧಿಸಲ್ಪಟ್ಟವನೆಂದರೆ **ನಮಗೆ ಪ್ರಿಯನೂ ಜೊತೆಗೆಲಸದವನೂ ಆಗಿರುವ ಫಿಲೆಮೋನ**. ಆತನು ಕೊಲೊಸ್ಸೆಯಲ್ಲಿನ ಸಭೆಯ ಒಬ್ಬ ಸದಸ್ಯನಾಗಿರಬಹುದು ಯಾಕೆಂದರೆ ಆತನ ದಾಸನಾದ ಓನೇಸಿಮನ ಕುರಿತಾಗಿ, ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯಲ್ಲಿ "ನಿಮ್ಮ ಊರಿನ" (4:9) ಎಂದು

ಹೇಳಲಾಗಿರುತ್ತದೆ. ಇದನ್ನು ಬಿಟ್ಟರೆ, ಹೊಸ ಒಡಂಬಡಿಕೆಯು ಫಿಲೆಮೋನನ ಕುರಿತಾಗಿ ಹೇಳುವದೆಲ್ಲವೂ ಆತನ ಹೆಸರನ್ನು ಹೊಂದಿರುವ ಫಿಲೆಮೋನನಿಗೆ ಬರೆದ ಪತ್ರಿಕೆಯಲ್ಲಿ ಇರುತ್ತದೆ. ಆತನು ಕ್ರೈಸ್ತ ದಾಸನ-ಯಜಮಾನನಾಗಿದ್ದು ಕೊಲೊಸ್ಸೆಯಲ್ಲಿನ ಸಭೆಗೆ ತನ್ನ ಮನೆಯಲ್ಲಿ ಆಥಿತ್ಯವನ್ನು ನೀಡುವವನಾಗಿದ್ದನು. ಯಾವದೋ ಒಂದು ಹಂತದಲ್ಲಿ, ಆತನು ಪೌಲನ ಬೋಧನೆಯ ಪ್ರಭಾವಕ್ಕೊಳಗಾಗಿದ್ದನು-ಎಫೆಸದಲ್ಲಿರುವ ವೇಳೆ ನೇರವಾಗಿ ಇರಬಹುದು ಅಥವಾ ಪರೋಕ್ಷವಾಗಿ ಎಪಫ್ರನ ಮುಖಾಂತರವಾಗಿಯಾದರೂ ಇರಬಹುದು – ಮತ್ತು ಒಬ್ಬ ಕ್ರೈಸ್ತನಾಗಿ ಪರಿವರ್ತನೆಗೊಂಡನು (ನೋಡಿರಿ ವ. 19). ಪೌಲನು ಆತನನ್ನು ಸೌಮ್ಯತೆಯಿಂದ ("ನಮಗೆ ಪ್ರಿಯನೂ") ಮತ್ತು ಗೌರವದಿಂದ ("ಜೊತೆಗೆಲಸದವನು") ಸಂಬೋಧಿಸಿದನು.

**ವಚನ 2. ಸಹೋದರಿಯಾದ ಅಪ್ಫಿಯಳ** ಸಂಬೋಧಿಸಲ್ಪಟ್ಟ ಎರಡನೆಯ ವ್ಯಕ್ತಿಯಾಗಿದ್ದಳು. ಆಕೆಯ ವಿಷಯದಲ್ಲಿ ಖಚಿತವಾಗಿ ತಿಳಿಯಬಹುದಾದದ್ದು ಏನೆಂದರೆ ಆಕೆಯು ಕೊಲೊಸ್ಸೆಯಲ್ಲಿನ ಒಬ್ಬ ಮಹಿಳಾ ಕ್ರೈಸ್ತಳಾಗಿದ್ದಳು ಎಂಬದೆ. ಆಕೆಯು ಫಿಲೆಮೋನನ ಹೆಂಡತಿಯಾಗಿದ್ದಳೋ ಅಥವಾ ಸಹೋದರಿಯಾಗಿದ್ದಳೋ ಎಂಬುದು ಅನಿಶ್ಚಿತವಾಗಿರುತ್ತದೆ. ಆಕೆಯ ಬಗ್ಗೆ ಹೀಗೆ ಉಲ್ಲೇಖಿಸುವದರ ವಿಷಯದಲ್ಲಿ Theodore of Mopsuestia (ಕ್ರಿ.ಶ. 350–428) ಈ ಅಭಿಪ್ರಾಯವನ್ನು ತಿಳಿಸುತ್ತಾನೆ, "ಪೌಲನು ಫಿಲೆಮೋನ ಹಾಗೂ ಅಪ್ಫಿಯಳನ್ನು ಸಮಾನವಾಗಿ ವಂದಿಸುವದು ಅತ್ಯವಶ್ಯವೆಂದು ಪರಿಗಣಿಸುತ್ತಾನೆ. ಆ ಮೂಲಕ ಆತನು ಪುರುಷರು ಹಾಗೂ ಸ್ತ್ರೀಯರ ನಡುವೆ ನಂಬಿಕೆ ಅಥವಾ ನಂಬಿಕೆಯ ಬಲದಲ್ಲಿ ವ್ಯತ್ಯಾಸವಿರುವದಿಲ್ಲ ಎಂಬುದನ್ನು ತೋರ್ಪಡಿಸಬೇಕೆಂದು ಬಯಸುತ್ತಾನೆ."[2]

ಸಂಬೋಧನೆಯಲ್ಲಿ ಪಟ್ಟಿಯಲ್ಲಿರುವ ಮೂರನೆಯ ಹಾಗೂ ಕಡೇ ವ್ಯಕ್ತಿಯೆಂದರೆ **ನಮ್ಮ ಸಹಭಟನಾದ ಅರ್ಖಿಪ್ಪ**. ಈತನು ಕೊಲೊಸ್ಸೆಯಲ್ಲಿನ ಸಭೆಯ ಇನ್ನೊಬ್ಬ ಸದಸ್ಯನು, ಆತನು ಫಿಲೆಮೋನ ಹಾಗೂ ಅಪ್ಫಿಯಳ ಸಂಬಂಧಿಯಾಗಿರುವ ಸಾಧ್ಯತೆಯಿರುತ್ತದೆ. ಪೌಲನು ಒಬ್ಬ ಕ್ರೈಸ್ತನ ಜೀವನ ಹಾಗೂ ಸೇವೆಯನ್ನು ಬಣ್ಣಿಸುವದಕ್ಕೆ ಮಿಲಿಟರಿ ಸಾದೃಶ್ಯವನ್ನು ಬಳಸುವದಕ್ಕೆ ನಿಸ್ಸಂಕೋಚದಿಂದಿದ್ದನು (ಎಫೆಸ 6:10–17). "ಸಹಭಟ" ಎಂದು ಹೇಳುವದು ಧೈರ್ಯದಿಂದ, ತ್ಯಾಗಮಯವಾಗಿ, ಮತ್ತು ನಂಬಿಗಸ್ತನಾಗಿ ಸೇವೆ ಮಾಡಿದ ಒಬ್ಬನನ್ನು ಸೂಚಿಸುವದಾಗಿದೆ.

ಕಡೇ ಸಂಬೋಧನೆಯು ಒಂದು ಗುಂಪು ಆಗಿತ್ತು: **ನಿಮ್ಮ ಮನೆಯಲ್ಲಿ ಕೂಡುವ ಸಭೆ**. ಪೌಲ ಹಾಗೂ ಫಿಲೆಮೋನನ ನಡುವಿನ ಖಾಸಗಿ ವಿಚಾರ ಎಂದು ತೋರಿದ ಸಂಗತಿಗೊಳಗೆ ಪೌಲನು ಅಪ್ಫಿಯಳನ್ನು ಮತ್ತು ಅರ್ಖಿಪ್ಪನನ್ನು ಕರೆ ತಂದದ್ದು ಮಾತ್ರವೇ ಆಗಿರಲಿಲ್ಲ, ಆದರೆ ಆತನು ಈ "ಖಾಸಗಿ" ಪತ್ರವನ್ನು ಇಡೀ ಸಭೆಯನ್ನು ಸಂಬೋಧಿಸಿ ಬರೆಯುತ್ತಾನೆ.

**ವಚನ 3. ನಮ್ಮ ತಂದೆಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ** ಎಂಬುದು ಪೌಲನ ಪತ್ರಿಕೆಗಳಲ್ಲಿ ಆತನ ವೈಶಿಷ್ಟ್ಯವಾದ ವಂದಿಸುವಿಕೆಯಾಗಿತ್ತು. "ಕೃಪೆ" ಎಂಬುದು ರಕ್ಷಣೆಯನ್ನು ತರುವಂಥ ದೇವರ ವರದಾನವಾಗಿರುತ್ತದೆ (ಎಫೆಸ 2:8), ಮತ್ತು "ಶಾಂತಿ" ಎಂಬುದು ಕ್ರಿಸ್ತನ ಮೂಲಕ ಕ್ರೈಸ್ತರು ದೇವರ ಸಂಗಡ ಹೊಂದಿರುವ ಹೊಸ ಸಂಬಂಧದ ಬಣ್ಣನೆ ಆಗಿರುತ್ತದೆ (ರೋಮಾ 5:1).

ಇಲ್ಲಿ ವಿಶೇಷ ಆಸಕ್ತಿಯಿರುವ ಸಂಗತಿಯೆಂದರೆ ಯೇಸುವಿನ ಬಿರುದಾಗಿರುವ "ಕರ್ತನು" ಎಂಬದು. ನಿಕಟ ಸಂಬಂಧವುಳ್ಳ ಕೊಲೊಸ್ಸೆಯವರಿಗೆ ಪತ್ರಿಕೆಯಲ್ಲಿ,[3] ಪೌಲನು ಯಜಮಾನ ಹಾಗೂ ದಾಸನ ಸಂಬಂಧದ ಬಗ್ಗೆ ಮಾತಾಡಿದನು. ಆ ಸಂದರ್ಭದಲ್ಲಿ, ಆತನು "ಒಬ್ಬ ದಾಸನ ಯಜಮಾನ" ಮತ್ತು "ಕರ್ತನಾದ ಕ್ರಿಸ್ತನು" ಎಂಬರ್ಥವನ್ನು ಸೂಚಿಸುವದಕ್ಕೆ "ಕರ್ತನು" (κύριος, *kurios*) ಎಂಬುದಕ್ಕಾಗಿರುವ ಗ್ರೀಕ್ ನಾಮಪದವನ್ನು ಬಳಸಿದನು:

> ದಾಸತ್ವದಲ್ಲಿರುವವರೇ, *ಈ ಲೋಕದಲ್ಲಿನ ನಿಮ್ಮ ಯಜಮಾನರಿಗೆ* ಎಲ್ಲಾ ವಿಷಯಗಳಲ್ಲಿ ವಿಧೇಯರಾಗಿರಿ; ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ನಿಮ್ಮ ಯಜಮಾನರು ನೋಡುತ್ತಿರುವಾಗ ಮಾತ್ರ ಸೇವೆ ಮಾಡದೆ *ಕರ್ತನಿಗೆ ಭಯಪಡುವವರಾಗಿ* ಸರಳಮನಸ್ಸಿನಿಂದ ಕೆಲಸ ಮಾಡಿರಿ. ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ *ಕರ್ತನಿಗೋಸ್ಕರವೇ* ಎಂದು ಮನಃಪೂರ್ವಕವಾಗಿ ಮಾಡಿರಿ. ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವೆವೆಂದು ತಿಳಿದಿದ್ದೀರಲ್ಲಾ, ನೀವು *ಕರ್ತನಾದ ಕ್ರಿಸ್ತನಿಗೇ* ದಾಸರಾಗಿದ್ದೀರಿ . . .
>
> *ಯಜಮಾನರೇ,* ಪರಲೋಕದಲ್ಲಿ ನಿಮಗೂ *ಯಜಮಾನನೊಬ್ಬ*ನಿದ್ದಾನೆಂದು ತಿಳಿದು ನಿಮ್ಮ ದಾಸರಿಗೆ ನ್ಯಾಯವಾದದ್ದನ್ನೂ ಸರಿಯಾದದ್ದನ್ನೂ ಮಾಡಿರಿ (ಕೊಲೊಸ್ಸೆ 3:22–4:1; ಒತ್ತಿ ಹೇಳಿದ್ದು ನನ್ನದು).

ಪೌಲನು ಒಬ್ಬ ದಾಸನ-ಯಜಮಾನನಿಗೆ ಆತನ ದಾಸನ ವಿಷಯದಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುವದಕ್ಕೆ ಮುಂದಾಗಲು ಸಿದ್ಧತೆಗೊಳ್ಳುವವನಾಗಿದ್ದದರಿಂದ, ಯಜಮಾನರು ಮತ್ತು ದಾಸರು ಇಬ್ಬರೂ "ಕರ್ತನಾದ ಯೇಸು ಕ್ರಿಸ್ತನ" ಅಧಿಕಾರಕ್ಕೊಳಪಟ್ಟಿದ್ದಾರೆಂಬುದನ್ನು ಜ್ಞಾಪಿಸುವದರೊಂದಿಗೆ ಆತನು ಆರಂಭಿಸಿದ್ದ ಸರಿ ಹೊಂದುವಂಥದ್ದು ಹಾಗೂ ಬಹುಶಃ ಗಮನ ಸೆಳೆಯುವಂಥದ್ದು ಆಗಿತ್ತು.

## ಅನ್ವಯಿಸುವಿಕೆ

### "ಈ ವಾರ ಎರಡು ಪತ್ರ ಬಂದವು"

ಹೊಸ ಒಡಂಬಡಿಕೆಯಲ್ಲಿನ ಅನೇಕ ಪತ್ರಿಕೆಗಳು ಮೊದಲು ಕೂಡಿ ಬಂದ ಸಭೆಯಲ್ಲಿ ಓದಲ್ಪಡುತ್ತಿದ್ದವು (ಕೊಲೊಸ್ಸೆ 4:16). ಅದನ್ನು ಮನಸ್ಸಿನಲ್ಲಿಟ್ಟುಕೊಂಡವರಾಗಿ, ಕೊಲೊಸ್ಸೆಯದ ಸಭೆಯಲ್ಲಿನ ಒಂದು ಭಾನುವಾರದಂದು ತುಖಿಕ ಮತ್ತು ಒನೇಸಿಮರು ಪೌಲನಿಂದ ಎರಡು ಪತ್ರಿಕೆಗಳನ್ನು ಹೊತ್ತುಕೊಂಡು ಬರುವದನ್ನು ಊಹಿಸಿಕೊಳ್ಳಿರಿ. ಮೊದಲನೆಯದು ಇಡೀ ಸಭೆಗೋಸ್ಕರ ಬರೆದ ಸಾಮಾನ್ಯ ಪತ್ರಿಕೆಯಾಗಿದ್ದರೆ, ಮತ್ತೊಂದು ಪತ್ರಿಕೆಯು ನೇರವಾಗಿ ಫಿಲೆಮೋನನನ್ನು ಸಂಬೋಧಿಸಿ ಬರೆದದ್ದಾಗಿತ್ತು, ಆತನೊಬ್ಬ ಕ್ರೈಸ್ತನಾಗಿದ್ದು ಆತನ ಮನೆಯಲ್ಲಿಯೇ ಸಭೆಯು ನಿಯತವಾಗಿ ಕೂಡಿ ಬರುತ್ತಿತ್ತು.

ಸಭೆಯು ಆರಾಧನೆಗಾಗಿ ಆ ಸಾಯಂಕಾಲದಂದು ಕೂಡಿ ಬರುವಾಗ ದಾಸರು ಮತ್ತು ದಾಸನ-ಯಜಮಾನರು ಏಕ ರೀತಿಯಲ್ಲಿ ಒಟ್ಟಾಗಿ ಸೇರಿ ಬರುತ್ತಿದ್ದರು. ಒನೇಸಿಮನ

ಆಕಸ್ಮಿಕ ಹಿಂದಿರುಗಿ ಬರುವಿಕೆಯ ಕಾರಣದಿಂದಾಗಿ, ದೀರ್ಘಕಾಲದಿಂದ ಗೈರಾಗಿದ್ದ ಈ ದಾಸನ ಕುರಿತಾಗಿ ಚಿಕ್ಕ ಸಭೆಯಲ್ಲಿ ನಿಶ್ಚಯವಾಗಿಯೂ ಹರಟೆಮಾತು ಇತ್ತು, ಜನರು ಫಿಲೆಮೋನನ ಮನೆಯಲ್ಲಿ ಬಂದು ಸೇರಲಾರಂಭಿಸಿದ ಹಾಗೆ ಗಾಳಿಯಲ್ಲಿ ಉದ್ವೇಗದ ವಾತಾವರಣವು ಭಾರವಾಗಿ ನೇತಾಡುತ್ತಿತ್ತು. ಎಲ್ಲರೂ ಬಂದು ಸೇರಿದ ಬಳಿಕ, ಫಿಲೆಮೋನನು ಎದ್ದು ನಿಂತು ತನ್ನ ಕೈ ಸನ್ನೆ ಮಾಡಿ ಸಭಿಕರನ್ನು ನಿಶಬ್ದಗೊಳಿಸಿದನು. ಆತನು ಕೂಡಿ ಬಂದ ಜನರಿಗೆ ನಮ್ಮ ಪ್ರಿಯ ಅಪೊಸ್ತಲನಾದ ಪೌಲನ ಕುರಿತಾದ ಸುದ್ಧಿಯೊಂದಿಗೆ ತುಖಿಕನು ರೋಮಾಪುರದಿಂದ ಬಂದಿರುತ್ತಾನೆಂದು ಹೇಳಿ ಮುಂದಿನ ಕೂಟವನ್ನು ಆತನಿಗೆ ಒಪ್ಪಿಸುತ್ತಾನೆ.

ಪೌಲನು ಹೇಗಿರುತ್ತಾನೆಂದು ಹೇಳುವ ಮೂಲಕ ತುಖಿಕನು ಆರಂಭಿಸುತ್ತಾನೆ; ಆತನ ಆರೋಗ್ಯವು ಉತ್ತಮವಾಗಿದೆ, ಆತನ ಆತ್ಮವು ಬಲಗೊಂಡಿರುತ್ತದೆ, ಮತ್ತು ಆತನ ಜೀವಿಸುವ ಸ್ಥಿತಿಗತಿಗಳು ಸಹನೀಯವಾಗಿರುತ್ತವೆ. ನಂತರ, ಆ ಕ್ಲುಪ್ತವಾದ ಪರಿಚಯ ತಿಳಿಸಿದ ಮೇಲೆ, ಆತನು ತನ್ನೊಂದಿಗೆ ತಂದಿದ್ದ ಎರಡರಲ್ಲೊಂದು ಪತ್ರಿಕೆಯನ್ನು ಹೊರಕ್ಕೆ ಎಳೆಯುತ್ತಾನೆ. ಆತನು ಓದಲಾರಂಭಿಸುತ್ತಾನೆ. ಅಪೊಸ್ತಲನಾದ ಪೌಲನು ತಮಗೆ ನೀಡಿದ ಗೌರವಪೂರ್ವಕವಾದ ಆದರಭಿಮಾನವನ್ನು ಕೇಳಿ ಇಡೀ ಸಭೆಯು ಮುಗುಳ್ನಗುವನ್ನು ಬೀರಿರಬೇಕೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಹತ್ತಕ್ಕಿಂತಲೂ ಕಡಿಮೆ ವರ್ಷಗಳ ಹಿಂದಷ್ಟೆ, ಕೊಲೊಸ್ಸೆಯಲ್ಲಿ ಒಬ್ಬನೇ ಒಬ್ಬ ಕ್ರೈಸ್ತನು ಸಹ ಇರಲಿಲ್ಲ; ಆದರೆ ಅದು ಅವರ ಸ್ವಂತ ಊರಾದ ಲೈಕಸ್ ಕಣಿವೆಯಿಂದ ಕೆಲವೇ ದಿನಗಳ ಪ್ರಯಾಣದಷ್ಟು ದೂರದ ಎಫೆಸ ಎಂಬ ಮಹಾ ಪಟ್ಟಣದಲ್ಲಿ ಪೌಲನ ಬೋಧನೆ ಮತ್ತು ಉಪದೇಶವನ್ನು ಮಾಡುತ್ತಾ ಮೂರು ವರ್ಷಗಳನ್ನು ಕಳೆದ ಕಾಲಕ್ಕಿಂತ ಮುಂಚಿನ ಸ್ಥಿತಿಯಾಗಿತ್ತು. ಜನರು ವ್ಯಾಪಾರಕ್ಕಾಗಿ ಎಫೆಸಕ್ಕೆ ಹೋಗಿ ಬರುತ್ತಾ ಇದ್ದದರಿಂದ ಸುವಾರ್ತೆಯು ಇಡೀ ಗ್ರಾಮಾಂತರ ಪ್ರದೇಶದಲ್ಲೆಲ್ಲಾ ಹರಡುವಂತೆ ತೋರಿತು. ಹತ್ತಿರದ ಲವೊದಿಕೀಯದಲ್ಲಿ ಒಂದು ಸಭೆಯು ಸ್ಥಾಪಿಸಲ್ಪಟ್ಟಿತು, ಮತ್ತು ಬಳಿಕ ಒಂದು ದಿನ ಎಪಫ್ರನೆಂಬ ಒಬ್ಬ ಮನುಷ್ಯನು ಕೊಲೊಸ್ಸೆಗೆ ಬಂದು ತಲುಪಿ ಕರ್ತನಾದ ಯೇಸು ಕ್ರಿಸ್ತನ ಕುರಿತು ಹೇಳಲಾರಂಭಿಸಿದನು. ಬಹಳ ಶೀಘ್ರದಲ್ಲಿಯೇ, ಕೊಲೊಸ್ಸೆಯಲ್ಲಿ ಹಲವಾರು ಕ್ರೈಸ್ತರಿದ್ದರು, ಮತ್ತು ಅವರು ಕರ್ತನ ದಿನದಂದು ಫಿಲೆಮೋನನ ಮನೆಯಲ್ಲಿ ಕೂಡಿ ಬರುವದಕ್ಕಾರಂಭಿಸಿದರು. ಕೊಲೊಸ್ಸೆಯಲ್ಲಿನ ಸಭೆಯ ಸದಸ್ಯರಲ್ಲಿ ಕೆಲವರು ಎಫೆಸದಲ್ಲಿ ಪೌಲನನ್ನು ಭೇಟಿಯಾಗಿದ್ದರು, ಆದರೆ ಸ್ವತಃ ಪೌಲನಿಗೆ ಅವರ ಪಟ್ಟಣಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಹೇಗಿದ್ದರೂ, ಈ ಸದಸ್ಯರು ತಮಗೆ ಪೌಲನ ಉತ್ತಮ ಪರಿಚಯಿವಿರುವಂತೆ ಭಾವಿಸಿಕೊಂಡಿದ್ದರು, ಮತ್ತು ಆತನು ಪತ್ರಿಕೆಯಲ್ಲಿ ಅವರಿಗೆ ವಂದನೆ ಹೇಳಿದ್ದನ್ನು ಓದಿದಾಗ ಅವರೆಲ್ಲರೂ ಮಂದಹಾಸ ಬೀರಿದರು.

ಮುಂದಿನ ಮೂವತ್ತು ನಿಮಿಷಗಳ ವರೆಗೆ, ತುಖಿಕನು ಪೌಲನ ಪತ್ರಿಕೆಯನ್ನು ಓದುತ್ತಿರುವ ವೇಳೆ ಸಭಿಕರು ಕಿವಿಗೊಟ್ಟು ಆತನ ಪ್ರತಿಯೊಂದು ಮಾತನ್ನು ಕೇಳಿಸಿಕೊಂಡರು. ಆತನು ಅವರಿಗೆ ಕ್ರಿಸ್ತನ ಶ್ರೇಷ್ಠತೆಯನ್ನು ಮತ್ತು ಆತನಿಗೆ ಹೋಲಿಸಿದರೆ ಲೋಕದಲ್ಲಿ ಬೇರೆ ಯಾವದೂ ಸರಿಸಾಟಿಯಿಲ್ಲ ಎಂಬುದನ್ನು ಜ್ಞಾಪಿಸಿದನು. ಆತನು ಓದುವದನ್ನು ಮುಂದುವರೆಸಿದ ಹಾಗೆ, ಇತ್ತೀಚೆಗೆ ಜನರಲ್ಲಿದ್ದ ಆತ್ಮೀಕ ಸಂಗತಿಗಳ ಕುರಿತಾದ ಗೊಂದಲವೆಲ್ಲಾ ಆವಿಯಂತೆ ಕಣ್ಮರೆಯಾಗಲಾರಂಭಿಸಿತು. ಯೇಸುವಿನ

ಕುರಿತಾದ ಒಂದು ಸ್ಪಷ್ಟವಾದ ದರ್ಶನವು ಅಂಥ ಪರಿಣಾಮವನ್ನು ಹೊಂದಿರುತ್ತದೆ. ಹೇಗೂ, ಪೌಲನು ಅವರನ್ನು ಕರ್ತನ ಅನ್ಯೋನ್ಯತೆಯಲ್ಲಿನ ಹೊಸ ಎತ್ತರಗಳಿಗೆ ಏರಿಸಿದಷ್ಟೆ ಶೀಘ್ರದಲ್ಲಿ, ಒಬ್ಬ ಬೋಧಕನು ಯಾವಾಗಲೂ ಹೇಳುತ್ತಿದ್ದ ಹಾಗೆ, “ಆತನು ಬೋಧಿಸುವದನ್ನು ನಿಲ್ಲಿಸಿ ಅವರ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಲಾರಂಭಿಸಿದನು!”

ಪೌಲನು ಗಂಡಂದಿರು ಹಾಗೂ ಹೆಂಡತಿಯರ ಬಗ್ಗೆ, ನಂತರ ತಂದೆತಾಯಿಗಳು ಹಾಗೂ ಮಕ್ಕಳ ಬಗ್ಗೆ ಮಾತಾಡಿದಾಗ ಮುಜುಗರದ ಪರಿಸ್ಥಿತಿಯುಂಟಾಗಿತ್ತು. ಹೇಗೂ, ಹೆಚ್ಚು ಮುಜುಗರದ ಕ್ಷಣವು, ವಾಚಕನು ದಾಸರು ಹಾಗೂ ಅವರ ಯಜಮಾನರ ಕುರಿತು ಓದಿದಾಗ ಬಂದಿತ್ತು. ಕೊಲೊಸ್ಸೆಯಲ್ಲಿನ ಸಭೆಯವರ ವಿಷಯದಲ್ಲಾದರೋ, ಇದು ಕೇವಲ ಯಾವದೋ ಒಂದು ಸಾಮಾಜಿಕ ಪಿಡುಗನ್ನು ಆರಿಸಿ ತೆಗೆದು ಮಾಡಿದ ಚರ್ಚೆ ಮಾತ್ರವೇ ಆಗಿರಲಿಲ್ಲ; ಇದೇ ಅವರ ಜೀವನವಾಗಿತ್ತು. ಆ ಕೋಣೆಯಲ್ಲೆಲ್ಲಾ ಸುತ್ತಲೂ ಯಜಮಾನರು ಹಾಗೂ ದಾಸರು ಕುಳಿತುಕೊಂಡಿದ್ದರು. ಅವರಲ್ಲಿ ಅವರ ಕುಲ, ಉಡುಪು, ಅಥವಾ ಅವರ ವ್ಯವಹಾರ ಚಾತುರ್ಯದ ಆಧಾರದಲ್ಲಿ ವ್ಯತ್ಯಾಸವನ್ನು ಗುರುತಿಸುವದಕ್ಕೆ ಸಾಧ್ಯವಿರಲಿಲ್ಲ, ಆದಾಗ್ಯೂ ಅವರಲ್ಲಿ ಯಾರು ದಾಸರು ಮತ್ತು ಯಾರು ದಾಸನ-ಯಜಮಾನರು ಎಂಬುದು ಎಲ್ಲರಿಗೂ ಗೊತ್ತಿತ್ತು. ಅದು ಯಾವದೇ ಭಾನುವಾರದಂದು ಸಹ ಸತ್ಯವಾಗಿರಬಹುದಾಗಿತ್ತು, ಆದರೆ ಈ ಭಾನುವಾರ ಆ ಜಾಗೃತಿಯು ಹಿಂದೆಂದಿಗಿಂತ ಹೆಚ್ಚು ಸೂಕ್ಷ್ಮವಾಗಿತ್ತು. ದೀರ್ಘಕಾಲದಿಂದ ಮತ್ತು ಯಜಮಾನನ ಅನುಮತಿಯಿಲ್ಲದೆ ಗೈರಾಗಿದ್ದ ಒನೇಸಿಮನು ಈಗ ಹಿಂದಿರುಗಿ ಬಂದಿದ್ದನು, ಮತ್ತು ಫಿಲೆಮೋನನು ಆತನ ವಿಷಯದಲ್ಲಿ ಯಾವ ಕ್ರಮವನ್ನು ತೆಗೆದುಕೊಳ್ಳುವನೆಂಬುದನ್ನು ನೋಡುವದಕ್ಕೆ ಪ್ರತಿಯೊಬ್ಬರು ಕಾಯುತ್ತಿದ್ದರು.

ದಾಸತ್ವದ ಕುರಿತಾದ ಪೌಲನ ಮಾತುಗಳು ಸಾಮಾಜಿಕ ಪದ್ಧತಿಯ ಬಗ್ಗೆಯಾಗಲಿ ಅಥವಾ ರೋಮನ್ ಸರ್ಕಾರ ಏನು ಮಾಡಬೇಕು ಎಂಬದರ ಬಗ್ಗೆಯಾಗಲಿ ಆಗಿರಲಿಲ್ಲ. ಬದಲಾಗಿ, ಕ್ರೈಸ್ತನು ಕ್ರಿಸ್ತನೊಂದಿಗೆ ಹೊಂದಿರುವ ಸಂಬಂಧವು ಹೇಗೆ ಅವನು ಅಥವಾ ಅವಳು ಬೇರೆಯವರೊಂದಿಗೆ ನಡೆದುಕೊಳ್ಳುತ್ತಾರೆಂಬುದನ್ನು ಮಾರ್ಪಡಿಸುತ್ತದೆಂಬ ಕುರಿತಾಗಿ ಕಾರ್ಯರೂಪದ ಮಾತುಗಳಾಗಿದ್ದವು. ಪೌಲನ ಪತ್ರಿಕೆಯು ದಾಸತ್ವದ ಕುರಿತ ವಿಷಯದ ಬಗ್ಗೆ ಪ್ರಸ್ತಾಪಿಸುತ್ತಿದ್ದಂತೆಯೇ ಇಡೀ ಸಭೆಯವರು ನೆಲವನ್ನು ದೃಷ್ಟಿಸುತ್ತಿರುವದನ್ನು ಮತ್ತು ಹೃದಯಗಳು ಇನ್ನಷ್ಟು ವೇಗವಾಗಿ ಬಡಿದುಕೊಳ್ಳಲಾರಂಭಿಸಿದ್ದನ್ನು ಊಹಿಸಿಕೊಳ್ಳಿರಿ. ಆತನು ಕರ್ತನಿಗೆ ಮಾಡುವ ಸೇವೆ, ಪ್ರತಿಫಲಗಳು, ಪರಿಣಾಮಗಳು, ಮತ್ತು ನ್ಯಾಯವಾಗಿರುವಿಕೆ ಇತ್ಯಾದಿಗಳ ಬಗ್ಗೆ ಮಾತಾಡಿದನು. ಅದೃಷ್ಟವಶಾತ್, ಕಠಿಣ ವಿಭಾಗವು ಮುಕ್ತಾಯಕ್ಕೆ ಬಂದಿತ್ತು. ತುಖಿಕನು ಪ್ರಾರ್ಥನೆಯ ಬಗ್ಗೆ ಓದಿ ಪೌಲನಿಂದ ವೈಯಕ್ತಿಕ ವಂದನೆಯನ್ನು ತಿಳಿಸುವ ಮೂಲಕ ಅಂತ್ಯಗೊಳಿಸಿದಾಗ ಪ್ರತಿಯೊಬ್ಬರು ಹೆಚ್ಚು ಸಲೀಸಾಗಿ ಉಸಿರಾಡಲಾರಂಭಿಸಿದ್ದರು.

ಆದಾಗ್ಯೂ, ಎಲ್ಲಕ್ಕಿಂತ “ಘೋರವಾದದ್ದು” ಇನ್ನೂ ಮೇಲೆ ಬರುವದಿತ್ತೆಂದು ತೋರುತ್ತದೆ. ತುಖಿಕನು “ಕೃಪೆಯು ನಿಮ್ಮೊಂದಿಗಿರಲಿ” ಎಂದು ಮುಕ್ತಾಯಗೊಳಿಸಿದ ಕೆಲವೇ ಕ್ಷಣಗಳ ಬಳಿಕ, ಆತನು ಇನ್ನೊಂದು ಚರ್ಮಕಾಗದದ ತುಂಡನ್ನು ಹೊರ ತೆಗೆದು ಓದಲಾರಂಭಿಸುತ್ತಾನೆ. ಪೌಲನು ಕೊಲೊಸ್ಸೆಯ ಸಭೆಯಲ್ಲಿನ ಸಮಸ್ಯೆಗಳ ಕುರಿತಾದ ತನ್ನ ಮಾತುಗಳನ್ನು ಇನ್ನೂ ಮುಗಿಸಿರುವದಿಲ್ಲ ಎಂಬುದನ್ನು ಶ್ರೋತೃಗಳು ಗ್ರಹಿಸಿಕೊಂಡರು.

ಆತನು ಯಾರ ಮನೆಯಲ್ಲಿ ಅವರೆಲ್ಲರೂ ಕೂಡಿ ಬಂದಿದ್ದರೋ ಆ ವ್ಯಕ್ತಿಯನ್ನು ಸಂಬೋಧಿಸಿ "ಫಿಲೆಮೋನನೇ," ಎಂದು ಆತನು ಬರೆಯುತ್ತಾನೆ. ಬಳಿಕ, ಆತನು ಫಿಲೆಮೋನನ ಮನೆಯ ಸದಸ್ಯರಾದ ಅಪ್ಫಿಯಳ ಹಾಗೂ ಅರ್ಖಿಪ್ಪನ ಹೆಸರುಗಳನ್ನು ಪ್ರಸ್ತಾಪಿಸುತ್ತಾನೆ. ಸಭೆಯ ಸದಸ್ಯರು ತಾವು ಬೇರೊಬ್ಬರ ವೈಯಕ್ತಿಕ ಪತ್ರವನ್ನು ಓದುತ್ತಿದ್ದೇವೋ ಅಥವಾ ಬೇರೊಬ್ಬರ ಖಾಸಗಿ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದೇವೋ ಎಂಬಂತೆ ಭಾವಿಸಿಕೊಳ್ಳಲಾರಂಭಿಸಿದರು.

ಸಂಬೋಧನೆಯ ಪಟ್ಟಿಯಲ್ಲಿದ್ದ ಕಡೇ ಹೆಸರು ಒಬ್ಬ ವ್ಯಕ್ತಿಯದ್ದಾಗಿರಲಿಲ್ಲ; ಅದು "ನಿಮ್ಮ ಮನೆಯಲ್ಲಿ ಕೂಡುವ ಸಭೆ" ಆಗಿತ್ತು. ಅದರಲ್ಲಿ ಎಲ್ಲರೂ ಸೇರಿದ್ದರು: ಕಿರಿಯರು ಮತ್ತು ಹಿರಿಯರು, ದಾಸರು ಮತ್ತು ಸ್ವತಂತ್ರರು, ಶ್ರೀಮಂತರು ಮತ್ತು ಬಡವರು, ಪುರುಷ ಮತ್ತು ಸ್ತ್ರೀ. ಎದುರಿಗಿರುವ ಸಮಸ್ಯೆಯನ್ನು ನಿಭಾಯಿಸುವದಕ್ಕಾಗಿ ಪ್ರತಿಯೊಬ್ಬರು ಆಮಂತ್ರಿಸಲ್ಪಟ್ಟಿದ್ದರಿಂದ, ಆ ದಿನದಲ್ಲಿ ಸಭೆಯು ಹಿಂದೆಂದಿಗಿಂತಲೂ ಈಗ ಒಂದು ಕುಟುಂಬವೆಂಬಂತೆ ಭಾವಿಸಿಕೊಂಡರು. ತುಖಿಕನು ಎರಡನೆಯ ಪತ್ರವನ್ನು ಓದಿ ಮುಗಿಸುವ ಹೊತ್ತಿಗೆ, ಸಹೋದರರು ಮತ್ತು ಸಹೋದರಿಯರಾಗಿರುವದರ ಹಾಗೂ ಕ್ರೈಸ್ತ ಅನ್ಯೋನ್ಯತೆಯಲ್ಲಿ ಪಾಲುಗಾರರಾಗುವದರ ಕುರಿತಾದ ಸಂಭಾಷಣೆಯು ವಾಸ್ತವಿಕತೆಯಾಯಿತು. ಒಬ್ಬ ದಾಸನ-ಯಜಮಾನನಿಗೆ ಆತನ ಓಡಿ ಹೋಗಿದ್ದ ದಾಸನ ವಿಷಯದಲ್ಲಿ ಮಾತುಗಳನ್ನು ಹೇಳಲಾಗುತ್ತಿದೆ, ಮತ್ತು ಆ ವಿಷಯದಲ್ಲಿ ಸಹಾಯವನ್ನು ಒದಗಿಸುವಂತೆ ಇಡೀ ಸಭೆಯನ್ನು ಕೇಳಿಕೊಳ್ಳಲಾಗುತ್ತಿದೆ. ಆ ದಿನದಲ್ಲಿ ಫಿಲೆಮೋನನಿಗೆ ಬರೆದ ಪತ್ರಿಕೆಯು ಓದಲ್ಪಡುವದನ್ನು ಕೇಳಿಸಿಕೊಂಡ ಪ್ರತಿಯೊಬ್ಬ ಕ್ರೈಸ್ತನು ಗ್ರಹಿಸಿಕೊಂಡಿದ್ದೇನೆಂದರೆ, ಕ್ರೈಸ್ತ ನಂಬಿಕೆಯು, ಅತ್ಯಂಥ ವೈಯಕ್ತಿಕವಾದದ್ದಾಗಿದೆಯಾದರೂ, ಅದೊಂದು ಖಾಸಗಿ ವಿಷಯವಾಗಿರಲಿಲ್ಲ ಎಂಬದೆ. ಸಭೆಯು, ಖಂಡಿತವಾಗಿಯೂ, ಒಂದು ಕುಟುಂಬವಾಗಿತ್ತು – ಮತ್ತು, ಆ ರೀತಿಯಲ್ಲಿರುವಾಗ, ಸದಸ್ಯರು ತಮ್ಮ ನಂಬಿಕೆಗೆ ಎದುರಾಗುವ ಸವಾಲುಗಳನ್ನು ಒಟ್ಟಾಗಿ ಎದುರಿಸುವ ಹೊಣೆಗಾರಿಕೆ ಹೊಂದಿರುತ್ತಾರೆ.

## ಇದು ಕೇವಲ ನಿನ್ನ ಕುರಿತು ಮಾತ್ರವೇ ಆಗಿರುವದಿಲ್ಲ!

ಫಿಲೆಮೋನ ಹಾಗೂ ಒನೇಸಿಮನ ನಡುವಿನ ಘರ್ಷಣೆಯು ಹೇಗೆ ಸಮಕಾಲೀನ ಸಭೆಯ ಸನ್ನಿವೇಶವೊಂದರಲ್ಲಿ ಹೇಗೆ ಸಮಾನಾರ್ಥವನ್ನು ಹೊಂದಿರಬಹುದಾದ ಒಂದು ವಿಧದ ಬಗ್ಗೆ Stanley Hauerwas ಮತ್ತು William H. Willimon ದೃಷ್ಟಾಂತ ಪಡಿಸುತ್ತಾರೆ. ಟಾಮ್, ಒಬ್ಬ ಮದ್ಯವ್ಯಸನಿಯಾದ ಸ್ವೇ ಎಂಬವಳನ್ನು ವಿವಾಹವಾಗಿದ್ದ ಹೃದಯ ಒಡೆದ ಗಂಡನಾಗಿದ್ದನು, ಆತನು ಒಂದು ದಿನ ತನ್ನ ಹೆಂಡತಿಯು ಪುನಃ ಕುಡಿದಿರುತ್ತಾಳೆಂಬ ಸುದ್ದಿಯನ್ನು ತಿಳಿಸಿ ತನ್ನ ಬೋಧಕನಿಗೆ ಕರೆ ಮಾಡಿದನು. ಇಷ್ಟೊಂದು ವರ್ಷಗಳಲ್ಲಿ ಆತನು ಆಕೆಯನ್ನು ಪುನಃ ಪುನಃ ಸೇರಿಸಿಕೊಂಡಿದ್ದನು, ಆದರೆ ಈ ಸಾರಿ ಆತನಿಗೆ ಇನ್ನೊಂದು ಸಾರಿ ಪ್ರಯತ್ನಿಸುವದಕ್ಕೆ ಶಕ್ತಿಯಾಗಲಿ ಅಥವಾ ಇಚ್ಛೆಯಾಗಲಿ ಇರಲಿಲ್ಲ. ಆತನ ನಿರೀಕ್ಷೆ ಮತ್ತು ತಾಳ್ಮೆಗಳು ಹೊರದು ಹೋಗಿದ್ದವು.

ದಂಪತಿಗಳ ಬೈಬಲ್ ತರಗತಿಯ ಸದಸ್ಯಳಾಗಿದ್ದ, ಆಲಿಸ್ ಎಂಬವಳು ಮರುದಿನ ಸ್ವೇಯಳ ಕುಡಿತದ ಚಟ, ಟಾಮ್‌ನ ಹತಾಶೆ, ಮತ್ತು ದಂಪತಿಗಳ ಮುರಿದು ಬೀಳಲಿದ್ದ

ದಾಂಪತ್ಯದ ಕುರಿತು ಚರ್ಚಿಸುವದಕ್ಕೆ ಬೋಧಕನನ್ನು ಕರೆದಳು. ಹಲವಾರು ನಿಮಿಷಗಳ ವರೆಗೆ ಕೈ ಹಿಂಡಿಕೊಳ್ಳುವ ಸಂಭಾಷಣೆಯ ನಂತರ, ಈ ಸಮಸ್ಯೆಯ ಕುರಿತಾಗಿ ಏನೋ ಆಕೆಯನ್ನು ಕಾಡುತ್ತಿರುವ ಬಗ್ಗೆ ಆಲೀಸ್ ತನ್ನ ಬೋಧಕನಿಗೆ ಹೇಳಿದಳು. ಅದೇನಾಗಿರಬಹುದು ಎಂದು ಕೇಳಿದಾಗ, ಆಲೀಸ್ ಹೀಗೆ ಪ್ರತ್ಯುತ್ತರ ನೀಡಿದಳು, "ಎಲ್ಲವನ್ನೂ ಆತನೊಬ್ಬನೇ ಹೊತ್ತುಕೊಳ್ಳಬೇಕೆಂದು ನಿರೀಕ್ಷಿಸಲ್ಪಡುವದನ್ನು ನೋಡಿ ನನಗೆ ಆತಂಕವುಂಟು ಮಾಡುತ್ತಿದೆ." ಬೈಬಲ್ ತರಗತಿಯಲ್ಲಿರುವವರೆಲ್ಲಾ ದಂಪತಿಗೆ ಸಹಾಯ ಮಾಡುತ್ತೇವೆಂಬುದನ್ನು ತಿಳಿಸಬೇಕೆಂದು ಆಕೆಯು ಒತ್ತಿ ಹೇಳಿದಳು: "ನಾವು ಆತನಿಗೆ ಸಹಾಯ ಮಾಡುವದಕ್ಕೆ ಬಯಸುತ್ತೇವೆಂದು ಟಾಮ್‌ಗೆ ತಿಳಿಸಬೇಕು. ನಾವು ಊಟಗಳನ್ನು ಒದಗಿಸಬಲ್ಲೆವು. ಮಕ್ಕಳಿಗೆ ಸಹಾಯ ಮಾಡಬಲ್ಲೆವು. ಅದೇನೂ ಸಮಸ್ಯೆಯಲ್ಲ. ಅಷ್ಟು ಮಾತ್ರವಲ್ಲದೆ, ಆಸ್ಪತ್ರೆಯು ಈಗಷ್ಟೇ ಮದ್ಯವ್ಯಸನಿಗಳಿಗೋಸ್ಕರ ಹೊಸ ಕಾರ್ಯಕ್ರಮವೊಂದನ್ನು ಆರಂಭಿಸಿರುತ್ತದೆ . . . ನಾನು ಹೇಳುವದೇನೆಂದರೆ ನಾವು ಅರ್ಧ ಮೊತ್ತವನ್ನು ಭರಿಸಬೇಕು . . ."[4] Hauerwas ಮತ್ತು Willimon ಈ ಅಭಿಪ್ರಾಯ ಪಟ್ಟಿದ್ದು ಸರಿಯಾಗಿಯೇ ಇರುತ್ತದೆ, "ಸುವಾರ್ತೆಯು ನಮ್ಮಿಂದ ಕೇಳುವ ಯಾವದನ್ನೂ – ಕನಿಕರ, ವಾಗ್ದಾನ ಕಾಪಾಡಿಕೊಳ್ಳುವದು, ಮಕ್ಕಳನ್ನು ಸಲಹುವದು, ಸ್ವಸ್ಥತೆ – ನಾವೊಬ್ಬರೇ ಮಾಡಬೇಕೆಂದು ನಿರೀಕ್ಷಿಸಲಾಗಿರುವದಿಲ್ಲ. ನಾವು ಕುಟುಂಬವಾಗಿ, ಟಾಮ್‌ನಂತಹ ಸಾಮಾನ್ಯ ಜನರನ್ನು ದೇವಜನರಾಗುವಂತೆ ಶಕ್ತಗೊಳಿಸುವ ಒಂದು ಸಮುದಾಯವಾಗಿ ಇದ್ದೇವೆ."[5]

ವ್ಯಕ್ತಿವಾದಿತ್ವವು ಇಂದು ಸಭೆಗೆ ಇರುವಂಥ ಅತ್ಯಂಥ ದೊಡ್ಡ ಸಾಂಸ್ಕೃತಿಕ ಗಂಡಾಂತರವಾಗಿರುತ್ತದೆ. ಸಭೆಯ ಕುಟುಂಬದಲ್ಲಿನ ಒಬ್ಬರು ಕ್ರೈಸ್ತರು ಎದುರಿಸುತ್ತಿರುವ ಒಂದು ಸಮಸ್ಯೆ ಬಗ್ಗೆ ಕೇಳುವಾಗ ಅಥವಾ ಅವರ ಯಾವದೋ ಒಂದು ಪ್ರಶ್ನಾರ್ಹವಾದ ನಡವಳಿಕೆಯನ್ನು ವಿರೋಧಿಸುವಾಗ ಅವರ ತುಟಿಗಳಿಂದ "ಇದು ನಿನ್ನ ಕೆಲಸವಲ್ಲ" ಎಂಬ ಮಾತುಗಳು ಕೇಳಿಸಲ್ಪಡುತ್ತವೆ. "ನಾನು ಯಾರಿಗೂ ನೋವುಂಟು ಮಾಡುತ್ತಿಲ್ಲ" ಮತ್ತು "ಇದು ನನ್ನ ಜೀವನ" ಎಂಬುವುಗಳು ಅದೇ ಆತ್ಮದ ಎರಡು ವ್ಯಕ್ತಪಡುವಿಕೆಗಳಾಗಿರುತ್ತವೆ. ನಮ್ಮ ಸಂಸ್ಕೃತಿಯಲ್ಲಿ ಈ ಹೇಳಿಕೆಗಳು ಬಹಳ ಸರ್ವಸಾಧಾರಣವಾಗಿ ಅಂಗೀಕರಿಸಲ್ಪಡುತ್ತವಾದ್ದರಿಂದ, ಕ್ರೈಸ್ತರು ಕೆಲವು ಸಾರಿ ತಾವು ಕ್ರೈಸ್ತ ನಂಬಿಕೆಗೆ ವಿರುದ್ಧವಾಗಿರುತ್ತಾರೆಂಬುದನ್ನು ಮರೆತು ಬಿಡುತ್ತಾರೆ.

ಸಭೆಯು ನಿಯಂತ್ರಣವನ್ನು ಸಾಧಿಸುವಂಥ ಕುಪಂಥವಲ್ಲ, ಆದರೆ ಧೈರ್ಯತುಂಬುವಂಥ, ಕೆಲವು ಸಾರಿ ವಿರೋಧಿಸುವಂಥ, ಮತ್ತು ಯಾವಾಗಲೂ ಪ್ರೀತಿಯನ್ನು ತೋರುವಂಥ ಒಂದು ಕುಟುಂಬವಾಗಿರುತ್ತದೆ. ಒಬ್ಬ ಕ್ರೈಸ್ತನು ಪಾಪದಲ್ಲಿ ಬೀಳುವಾಗ ಅಥವಾ ಹತಾಶೆಯೊಳಗೆ ಜಾರುವಾಗ, ಕ್ರಿಸ್ತನಲ್ಲಿನ ಚಿಂತೆಯುಳ್ಳ ಸಹೋದರರು ಮತ್ತು ಸಹೋದರಿಯರು ಅ ಸಮಸ್ಯೆಯನ್ನು ಜಯಿಸಿ ಹೊರಬರುವದಕ್ಕಾಗಿ ಆತನಿಗೆ ಸಹಾಯ ಒದಗಿಸುವದಕ್ಕೆ ಬೇಕಾದದ್ದನ್ನೆಲ್ಲಾ ಮಾಡತಕ್ಕದ್ದು. ಫಿಲೆಮೋನನಿಗೆ ಬರೆದ ಪತ್ರಿಕೆಯು ಇಂದು ಕ್ರೈಸ್ತರಿಗೆ ಇವುಗಳನ್ನು ಜ್ಞಾಪಕಪಡಿಸುತ್ತದೆ . . .

ನಿಮ್ಮ ದಾಂಪತ್ಯವು ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!

ನಿಮ್ಮ ಕಷ್ಟಗಳು ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!
ನಿಮ್ಮ ನಿಂದನೆ ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!
ನಿಮ್ಮ ಸಾಲದ ಸಮಸ್ಯೆಗಳು ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!
ನಿಮ್ಮ ಶೋಧನೆಗಳು ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!
ನಿಮ್ಮ ಅತಿಯಾಶೆಯು ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!
ನಿಮ್ಮ ಗರ್ಭಧರಿಸುವಿಕೆಯು ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!
ಕೆಲಸದ ಸ್ಥಳದಲ್ಲಿನ ನಿಮ್ಮ ನಡವಳಿಕೆಯು ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!
ನೀವು ಸುಳ್ಳಾಡುವದು ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!
ನಿಮ್ಮ ನೋವುಗಳು ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!
ನಿಮ್ಮ ಮರಣವು ಕೇವಲ ನಿಮ್ಮ ಕುರಿತು ಮಾತ್ರವೇ ಆಗಿರುವದಿಲ್ಲ!

---

## ಅಡಿಟಿಪ್ಪಣಿಗಳು

[1]ನೋಡಿರಿ ರೋಮಾ 1:1; 1 ಕೊರಿಂಥ 1:1; 2 ಕೊರಿಂಥ 1:1; ಗಲಾತ್ಯ 1:1; 1 ತಿಮೊಥೆ 1:1; 2 ತಿಮೊಥೆ 1:1; ತೀತನಿಗೆ 1:1. [2]Theodore of Mopsuestia, quoted in Peter Gorday and Thomas C. Oden, eds., *Colossians, 1—2 Thessalonians, 1—2 Timothy, Titus, Philemon*, Ancient Christian Commentary on Scripture (Downers Grove, Ill.: InterVarsity Press, 2000), 311. [3]ಕೊಲೊಸ್ಸೆಯವರಿಗೆ ಪತ್ರಿಕೆಯು ಫಿಲೆಮೋನನಿಗೆ ಬರೆದ ಪತ್ರಿಕೆಯ ಸಂಗಡ ಒಂದೇ ಭಾನುವಾರದಂದು ಒಂದೇ ಸಭೆಯವರಿಗೆ ಓದಲ್ಪಟ್ಟಿರುವ ಸಾಧ್ಯತೆಯಿರುತ್ತದೆ. [4]Adapted from Stanley Hauerwas and William H. Willimon, *Resident Aliens: Life in the Christian Colony* (Nashville: Abingdon Press, 1989), 135. [5]Ibid., 136.